(ಇ) ಸರ್ಕಾರದ ಆದೇಶ ಸಂಖ್ಯೆ: ಒಇ 235 ಕಅಸೇ 2005, ದಿನಾಂಕ: 05-08-2006 ರಲ್ಲಿ ಮಂಜೂರಾಗಿದೆ.

(ಈ) ಸರ್ವೆ ನಂ.206, ಹಿತ್ತಲಹಳ್ಳಿ ಗ್ರಾಮ, ಕಸಬಾ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು ಇಲ್ಲಿ 01 ಎಕರೆ ಜಮೀನನ್ನು ಗುರುತಿಸಿ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಯವರು ಮಂಜೂರು ಮಾಡಿದ್ದು, ಜಮೀನು ಇಲಾಖೆಯ ವಶದಲ್ಲಿದೆ.

(ಉ) ತಾತ್ಕಾಲಿಕವಾಗಿ ಅಗ್ನಿಶಾಮಕ ಠಾಣೆಯನ್ನು ಶಿಡ್ಲಘಟ್ಟ, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹಳೆಯ ಕಟ್ಟಡದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ.

(ಊ) ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ಪೊಲೀಸ್ ಕ್ರೀಡಾ ಕೂಟಗಳಿಗೆ ಅನುದಾನ

578 (1054) ಶ್ರೀ ಪ್ರಮೋದ್ ಮಧ್ವರಾಜ್ (ಉಡುಪಿ) :- ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವರ್ಷಂಪ್ರತಿ ನಡೆಯುವ ಜಿಲ್ಲಾ ಪೊಲೀಸ್ ಕ್ರೀಡಾಕೂಟಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ ;

(ಆ) ಹಾಗಿದ್ದಲ್ಲಿ, 2010-11, 2011-12 ಮತ್ತು 2012-13ನೇ ಸಾಲುಗಳಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ ಮತ್ತು ಬಿಡುಗಡೆಗೊಳಿಸಲಾದ ಅನುದಾನದಲ್ಲಿ ಯಾವ ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಮೊತ್ತ ವಿನಿಯೋಗಿಸಲಾಗಿದೆ ; (ವರ್ಷವಾರು ವಿವರ ನೀಡುವುದು)

(ಇ) ಜಿಲ್ಲಾ, ರಾಜ್ಯ, ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ಸರ್ಕಾರದಿಂದ ಏನೇನು ವಿಶೇಷ ಸವಲತ್ತು, ಸೌಲಭ್ಯಗಳನ್ನು ನೀಡಲಾಗುತ್ತಿದೆ ; (ವಿವರ ನೀಡುವುದು)

(ಈ) ಕೂಟಗಳಲ್ಲಿ ಭಾಗವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ಕ್ರೀಡಾ ತರಬೇತಿ ನೀಡಲು ಹಾಗೂ ಕ್ರೀಡಾಪಟುಗಳು ಕ್ರೀಡಾ ತರಬೇತಿ ಪಡೆಯಲು ಸರ್ಕಾರವು ಏನು ಕ್ರಮ ಕೈಗೊಂಡಿದೆ.

(ಉ) 2010-11, 2011-12 ಮತ್ತು 2012-13ನೇ ಸಾಲುಗಳಲ್ಲಿ ವಿಶೇಷ ಭತ್ಯೆ ಮತ್ತು ವಿಶೇಷ ರಜೆ ಪಡೆದ ಜಿಲ್ಲಾ, ರಾಜ್ಯ, ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ

ಮಟ್ಟದ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಉಡುಪಿ ಜಿಲ್ಲಾ ಪೊಲೀಸ್ ಸಿಬ್ಬಂದಿಗಳ ಹೆಸರು ಮತ್ತು ಅವರಿಗೆ ಪಾವತಿಸಿದ ವಿಶೇಷ ಭತ್ಯೆಯ ಭತ್ಯೆ ಇತ್ಯಾದಿಗಳ ವಿವರ ನೀಡುವುದು ;

(ಊ) ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ಕ್ರೀಡಾ ತರಬೇತಿ ಪಡೆಯಲು ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆಯೇ, ಒದಗಿಸಲಾಗುತ್ತಿದ್ದಲ್ಲಿ, 2010–11, 2011–12 ಮತ್ತು 2012–13ನೇ ಸಾಲುಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಕ್ರೀಡಾ ಸಾಮಗ್ರಿಗಳ ವಿತರಣೆಗೆ ಎಷ್ಟು ಮೊತ್ತ ವಿನಿಯೋಗಿಸಲಾಗಿದೆ ಮತ್ತು ಏನೇನು ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲಾಗಿದೆ ಮತ್ತು ಒದಗಿಸಲಾಗಿದೆ ? (ವಿವರ ನೀಡುವುದು)

ಶ್ರೀ ಕೆ. ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :–

(ಅ) ಹೌದು.

(ಆ) 1. 2010–11ರಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ 7,000/– ಅನುದಾನ ಬಿಡುಗಡೆಗೊಳಿಸಲಾಗಿದೆ. ಅನುದಾನದಲ್ಲಿ ಕ್ರೀಡಾ ವಿಜೇತರಿಗೆ ಬಹುಮಾನ ಹಾಗೂ ಕ್ರೀಡಾಕೂಟದ ಆರಂಭ ಹಾಗೂ ಮುಕ್ತಾಯ ಸಮಾರಂಭದ ಲಘು ಉಪಹಾರಕ್ಕೆ ಖರ್ಚು ಮಾಡಲಾಗಿದೆ.

2. 2011–12ರಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ 7,000/– ಅನುದಾನ ಬಿಡುಗಡೆಗೊಳಿಸಲಾಗಿದೆ. ಅನುದಾನದಲ್ಲಿ ಕ್ರೀಡಾ ವಿಜೇತರಿಗೆ ಬಹುಮಾನ ಹಾಗೂ ಕ್ರೀಡಾಕೂಟದ ಅರಂಭ ಹಾಗೂ ಮುಕ್ತಾಯ ಸಮಾರಂಭದ ಲಘು ಉಪಹಾರಕ್ಕೆ ಖರ್ಚು ಮಾಡಲಾಗಿದೆ.

3. 2012–13ರಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಕ್ರೀಡಾಕೂಟಕ್ಕೆ 10,500/– ಅನುದಾನ ಬಿಡುಗಡೆಗೊಳಿಸಲಾಗಿದೆ. ಅನುದಾನದಲ್ಲಿ ಕ್ರೀಡಾ ವಿಜೇತರಿಗೆ ಬಹುಮಾನ ಹಾಗೂ ಕ್ರೀಡಾಕೂಟದ ಆರಂಭ ಹಾಗೂ ಮುಕ್ತಾಯ ಸಮಾರಂಭದ ಲಘು ಉಪಹಾರಕ್ಕೆ ಖರ್ಚು ಮಾಡಲಾಗಿದೆ.

(ಇ) ಜಿಲ್ಲಾರಾಜ್ಯ, ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ಸರ್ಕಾರದಿಂದ ವಿಶೇಷ ಸಾಂದರ್ಭಿಕ ರಜೆ ನೀಡಲಾಗುತ್ತದೆ.

ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ರಾಜ್ಯವನ್ನು ಪ್ರತಿನಿಧಿಸಲು ಆಯ್ಕೆಯಾದ ಪೊಲೀಸ್ ಕ್ರೀಡಾಪಟುಗಳಿಗೆ ಅಥವಾ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ

ಕ್ರೀಡಾಕೂಟದಲ್ಲಿ ರಾಷ್ಟ್ರವನ್ನು ಪ್ರತಿನಿಧಿಸಲು ಆಯ್ಕೆಯಾದ ಪೊಲೀಸ್ ಕ್ರೀಡಾಪಟುಗಳಿಗೆ ಅವರ ಪ್ರಯಾಣದ ಅವಧಿಯಲ್ಲಿ ತಗಲುವ ಖರ್ಚುಗಾಗಿ ಕ್ರೀಡಾ ನಿಧಿಯಿಂದ ಧನ ಸಹಾಯವನ್ನು ಮಾಡಲಾಗುತ್ತದೆ.

ಪ್ರಶಸ್ತಿ / ಪದಕ ವಿಜೇತ ಪೊಲೀಸ್ ಕ್ರೀಡಾಪಟುಗಳಿಗೆ ಅವರ ಸಾಧನೆಗೆ ಅನುಗುಣವಾಗಿ ನಗದು ಬಹುಮಾನ ನೀಡಿ ಗೌರವಿಸಲಾಗುತ್ತದೆ.

ಅಖಿಲ ಭಾರತ ಪೊಲೀಸ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಆಯ್ಕೆಯಾದ ಪೊಲೀಸ್ ಕ್ರೀಡಾಪಟುಗಳಿಗೆ ತರಬೇತಿ ಅವಧಿಯಲ್ಲಿ ವಿಶೇಷ ಪೌಷ್ಟಿಕ ಆಹಾರ ಭತ್ಯೆಯನ್ನು ನೀಡಲಾಗುತ್ತದೆ.

(ಈ) ಅಖಿಲ ಭಾರತ ಪೊಲೀಸ್ ಮತ್ತಿತರೆ ಕ್ರೀಡಾಕೂಟದಲ್ಲಿ ಭಾಗವಹಿಸಲು ಆಯ್ಕೆಯಾದ ಪೊಲೀಸ್ ಕ್ರೀಡಾಪಟುಗಳಿಗೆ ಬೆಂಗಳೂರಿನಲ್ಲಿ ಯುವಜನ ಸೇವೆ ಕ್ರೀಡಾ ಇಲಾಖೆಯ ಅಥವಾ ಭಾರತೀಯ ಕ್ರೀಡಾ ಪ್ರಾಧಿಕಾರದ ನುರಿತ ತರಬೇತುದಾರರಿಂದ ವಿಶೇಷ ತರಬೇತಿಯನ್ನು ಇಲಾಖಾವತಿಯಿಂದ ನೀಡಲಾಗುತ್ತದೆ.

(ಉ) 2010-11, 2011-12 ಮತ್ತು 2012-13ನೇ ಸಾಲುಗಳಲ್ಲಿ ವಿಶೇಷ ಭತ್ಯೆ ಮತ್ತು ವಿಶೇಷ ರಜೆ ಪಡೆದ ಜಿಲ್ಲಾ, ರಾಜ್ಯ, ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಮಟ್ಟದ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿದ ಉಡುಪಿ ಜಿಲ್ಲಾ ಪೊಲೀಸ್ ಸಿಬ್ಬಂದಿಗಳ ಹೆಸರು:

1. 2010-11-ಯಾವುದೂ ಇಲ್ಲಾ.
2. 2011-12-ಯಾವುದೂ ಇಲ್ಲಾ.

2012-13 ಶ್ರೀ ಶಂಕರ, ಎಪಿಸಿ-23, ಡಿ.ಎ.ಆರ್. ಉಡುಪಿ ಇವರನ್ನು ತಿರುವನಂತಪುರದಲ್ಲಿ 33ನೇ ಮಾಸ್ಟರ್ಸ್ ಅಥ್ಲೇಟಿಕ್ ಚಾಂಪಿಯನ್ ಶಿಪ್-2013ರಲ್ಲಿ ಪಾಲ್ಗೊಳ್ಳಲು ದಿನಾಂಕ: 07-05-2012 ರಿಂದ 15-05-2012 ರವರೆಗೆ 08 ದಿನಗಳ ವಿಶೇಷ ಸಾಂದರ್ಭಿಕ ರಜೆಯನ್ನು ನೀಡಲಾಗಿದೆ ಹಾಗೂ ಶ್ರೀಲಂಕಾ ದೇಶದ ಕೊಲೊಂಬೊದಲ್ಲಿ ನಡೆದ ಶ್ರೀಲಂಕಾ 28ನೇ ಅಥ್ಲೆಟಿಕ್-2012ರಲ್ಲಿ ಪಾಲ್ಗೊಳ್ಳಲು ದಿನಾಂಕ: 24-07-2012 ರಿಂದ 31-07-2012 ರವರೆಗೆ 08 ದಿನಗಳ ವಿಶೇಷ ಸಾಂದರ್ಭಿಕ ರಜೆ ಹಾಗೂ ಪೊಲೀಸ್ ಕಲ್ಯಾಣ ನಿಧಿಯಿಂದ ` 10,000/- ಮಂಜೂರು ಮಾಡಲಾಗಿದೆ.

(ಊ) ಹೌದು.

ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಪೊಲೀಸ್ ಸಿಬ್ಬಂದಿಗಳಿಗೆ ಕ್ರೀಡಾತರಬೇತಿ ಪಡೆಯಲು ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.

2010–11, 2011–12 ಹಾಗೂ 2012–13ನೇ ಸಾಲುಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಕ್ರೀಡಾ ಸಾಮಗ್ರಿಗಳ ವಿತರಣೆಗೆ ವಿನಿಯೋಗಿಸಲಾದ ಮೊತ್ತ ಹಾಗೂ ಖರೀದಿಸಿದ ಕ್ರೀಡಾ ಸಾಮಗ್ರಿಗಳ ವಿವರ ಈ ಕೆಳಗಿನಂತಿರುತ್ತದೆ.

1. 2010–11 – ಯಾವುದೂ ಇಲ್ಲಾ.

2. 2011–12 – ` 5,302/– ಗಳಲ್ಲಿ ಕ್ರಿಕೆಟ್ ಬ್ಯಾಟ್, ಚೆಂಡು, ಶೆಟಲ್ ಕಾಕ್, ವಾಲಿಬಾಲ್ ನೆಟ್ ಹಾಗೂ ವಾಲಿಬಾಲ್‌ಗಳನ್ನು ಖರೀದಿಸಿ ವಿತರಿಸಲಾಗಿದೆ.

3. 2012–13 – ಯಾವುದೂ ಇಲ್ಲಾ.

ನಕ್ಸಲ್ ಹಾವಳಿ

512 (917) ಶ್ರೀ ಅಶೋಕ ಆರ್ (ಪದ್ಮನಾಭ ನಗರ) :– ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ನಕ್ಸಲರ ಹಾವಳಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ನಕ್ಸಲ್ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು ?

ಶ್ರೀ ಕೆ. ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) :–

(ಅ) ಕಳೆದ 5 ವರ್ಷಗಳಲ್ಲಿ ನಕ್ಸಲ್ ಚಟುವಟಿಕೆಗಳಲ್ಲಿ ಮಹತ್ವದ ಬದಲಾವಣೆಗಳು ಕಂಡುಬಂದಿರುವುದಿಲ್ಲ.

(ಆ) ಸರ್ಕಾರವು ಮೇ/2005 ನೇ ತಿಂಗಳಲ್ಲಿ ನಕ್ಸಲ್ ನಿಗ್ರಹಕ್ಕಾಗಿ 543 ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡ ನಕ್ಸಲ ನಿಗ್ರಹ ಪಡೆಯನ್ನು ರಚಿಸಿದ್ದು, ನಕ್ಸಲ್ ನಿಗ್ರಹಕ್ಕಾಗಿ ಪಶ್ಚಿಮ ಘಟ್ಟ ಪ್ರದೇಶದ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಕೊಡಗು ಮತ್ತು ತುಮಕೂರು ಜಿಲ್ಲೆಗಳ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ 13 ಎಎನ್‌ಎಫ್ ಕ್ಯಾಂಪ್‌ಗಳನ್ನು ಮಾಡಿ ಸತತವಾಗಿ ಕೂಂಬಿಂಗ್ ಮತ್ತು ಆಂಬುಷ್ ಕಾರ್ಯಾಚರಣೆ ಮಾಡಲಾಗುತ್ತಿದೆ ಮತ್ತು ನಕ್ಸಲರು ಸಣ್ಣ ಸಣ್ಣ ಗುಂಪುಗಳಾಗಿ ಮಲೆನಾಡಿನ ಅರಣ್ಯದಲ್ಲಿ ಓಡಾಡುತ್ತಿದ್ದು ಅವರ ಕಾರ್ಯಚಟುವಟಿಕೆಗಳನ್ನು ಮುಂದುವರಿಸದಂತೆ ಮತ್ತು ಕ್ಯಾಂಪ್‌ಗಳನ್ನು ಮಾಡದಂತೆ ನಕ್ಸಲ್ ನಿಗ್ರಹ ದಳವು ಸತತವಾಗಿ 595 ಆಂಬುಷ್, 2239 ಕೂಂಬಿಂಗ್, 41 ಜನಸಂಪರ್ಕ ಸಭೆಯನ್ನು ಮತ್ತು ವಾಹನ ತಪಾಸಣೆ ಕಾರ್ಯಾಚರಣೆಯನ್ನು ಮುಂದುವರಿಸಲಾಗುತ್ತಿದೆ.